# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 02.01.2021 ರ ಶನಿವಾರದಂದು ಮಾನ್ಯ ಜಂಟಿ ಆಯುಕ್ತರು (ಘ.ತ್ಯಾ.ನಿ) ಮತ್ತು ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ-90, ಹಲಸೂರು, ಶಿವಾಜಿನಗರ ಉಪವಿಭಾಗರವರ ಅಧ್ಯಕ್ಷತೆಯಲ್ಲಿ ಪಾಲಿಕೆಯ ವಾರ್ಡ್ ಸಂಖ್ಯೆ-90, ಹಲಸೂರು ವ್ಯಾಪ್ತಿಯಲ್ಲಿನ ನಾಗರೀಕ ಸಮಸ್ಯೆಗಳ ಹಾಗೂ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸುವ ಸಲುವಾಗಿ Zoom Meeting ಮೂಲಕ ಸಭೆಯನ್ನು ನಡೆಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದ ನಡವಳಿಗಳು.

**Zoom Meeting ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:-**

- ಜಂಟಿ ಆಯುಕ್ತರು (ಘತ್ಯಾನಿ) ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್ ಸಂಖ್ಯೆ-90, ಹಲಸೂರು, ಶಿವಾಜಿನಗರ ಉಪವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
- ಶ್ರೀ. ಕೆ. ಶಿವಕುಮಾರ್, ಸಹಾಯಕ ಕಂದಾಯ ಅಧಿಕಾರಿ, ಕಂದಾಯ ಇಲಾಖೆ, ಶಿವಾಜಿನಗರ ಉಪವಿಭಾಗ
- ಶ್ರೀ. ಆಕಾಶ್ ದೀಪ್ ಪಿ, ಕಿರಿಯ ಆರೋಗ್ಯ ಪರಿವೀಕ್ಷಕರು, ಘತ್ಯಾನಿ, ವಾರ್ಡ್ ಸಂಖ್ಯೆ-90
- ವಾರ್ಡ್ ಮಾರ್ಷಲ್
- ಪೌರಕಾರ್ಮಿಕರ ಸೂಪರ್ ವೈಸರ್ಸ್
- ಶ್ರೀ. ಪೂನಿಶ್ ಮೆಹ್ರಾ
- ಶ್ರೀಮತಿ. ಅನಿಂದಿತಾ ದಾಸ್ ವೇಲೂರಿ
- ಶ್ರೀ. ಕನ್ವೀರ್ ಎಂ
- ಶ್ರೀ. ಮುಕಾರುಮ್
- ಶ್ರೀ. ಅಶೋಕ್
- ಶ್ರೀ. ಮೋಹನ್ ರಾಜ್ ಎಸ್
- ಶ್ರೀ. ನವೀನ್ ಪಿಶೆ
- ಶ್ರೀ. ಶ್ರೀನಿವಾಸ್ ಕೆ
- ಶ್ರೀಮತಿ. ರೂಪ

(ಶ್ರೀ. ಪೂನಿಶ್ ಮೆಹ್ರಾ ರಿಂದ ಶ್ರೀಮತಿ. ರೂಪ ರವರೆಗೆ:) ವಾರ್ಡ್ ಕಮಿಟಿ ಸದಸ್ಯರು/ಸ್ಥಳೀಯ ನಿವಾಸಿಗಳು

ಮೊದಲಿಗೆ ಜಂಟಿ ಆಯುಕ್ತರು (ಘ.ತ್ಯಾ.ನಿ) ಹಾಗೂ ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ-90, ಹಲಸೂರುರವರು Zoom Meeting ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳಿಗೆ ಮತ್ತು ವಾರ್ಡ್ ಕಮಿಟಿ ಸದಸ್ಯರಿಗೆ ಹಾಗೂ ಸ್ಥಳೀಯ ನಿವಾಸಿಗಳಿಗೆ ಸ್ವಾಗತವನ್ನು ಬಯಸಿದರು ಹಾಗೂ ಸಭೆಯಲ್ಲಿ ಪಾಲಿಕೆಯ ವಾರ್ಡ್ ಸಂಖ್ಯೆ-90, ಹಲಸೂರು ವ್ಯಾಪ್ತಿಯಲ್ಲಿನ ನಾಗರೀಕ ಸಮಸ್ಯೆಗಳ ಹಾಗೂ ಅಭಿವೃದ್ಧಿ ಕಾರ್ಯಗಳ ಕುರಿತು ಚರ್ಚಿಸಿ ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

(ಮು.ತಿ.ನೋ)

ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳೊಂದಿಗೆ ಹಾಗೂ ಸದಸ್ಯರೊಂದಿಗೆ ವಾರ್ಡ್ ಸಮಸ್ಯೆಗಳ ಬಗ್ಗೆ ಹಾಗೂ ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ವಿಷಯಗಳ ಕುರಿತು ಈ ಹಿಂದೆ ನಡೆದ ಸಭೆಗಳಲ್ಲಿ ನಿರ್ಣಯಿಸಿದ ಅಂಶಗಳನ್ನು ಪ್ರಸ್ತಾಪಿಸಿ. ಈ ಕೆಳಕಂಡಂತೆ ಸರ್ಕಾರದ ಹಲವು ಇಲಾಖೆಗಳ ಅಧಿಕಾರಿಗಳೊಂದಿಗೆ ಹಾಗೂ ವಾರ್ಡ್‌ನಲ್ಲಿ ನೆಲೆಸಿರುವ ನಿವಾಸಿಗಳೊಂದಿಗೆ ಸಭೆಯಲ್ಲಿ ಚರ್ಚಿಸಲಾಯಿತು.

**ಮೊದಲಿಗೆ ವಾರ್ಡ್‌ವ್ಯಾಪ್ತಿಯಲ್ಲಿ ನೆಲೆಸಿರುವ ನಿವಾಸಿಗಳು ಈ ಕೆಳಕಂಡಂತೆ ತಮ್ಮ ಅಹವಾಲುಗಳನ್ನು ಸಭೆಯಲ್ಲಿ ಸಲ್ಲಿಸಿದರು ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.**

- ರಾಜಕಾಲುವೆಗಳಲ್ಲಿ ಪ್ರಾಣಿ ತ್ಯಾಜ್ಯ ಎಸೆಯುತ್ತಿರುವುದನ್ನು ತಡೆಗಟ್ಟಲು ಕೋರಲಾಯಿತು.
  **ಕ್ರಮ: ಸ್ಟಾರ್ಮ್ ವಾಟರ್ ಡ್ರೈನ್‌ರವರಿಗೆ ಪತ್ರ ಮುಖೇನ ದೂರು ನೀಡಲು ಸೂಚಿಸಲಾಯಿತು.**

- ಗಂಗಾಧರ್ ಚೆಟ್ಟಿ ರಸ್ತೆ, ಗುರುದ್ವಾರ ಹಾಗೂ ಯಲ್ಲಮ್ಮ ದೇವಸ್ಥಾನ ಇನ್ನೂ ಮುಂತಾದ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಕೋರಲಾಯಿತು.
  **ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಲೆಕ್ಟ್ರಿಕಲ್ ವಿಭಾಗರವರಿಗೆ ಸೂಕ್ತ ಕ್ರಮ ವಹಿಸಲು ಸೂಚಿಸಲಾಯಿತು.**

- ವಾರ್ಡ್‌ನ ಕೆಲವು ರಸ್ತೆಗಳಲ್ಲಿ ಖಾಸಗಿ ಸಂಸ್ಥೆಯವರು ಕೇಬಲ್ ತಂತಿಗಳನ್ನು ಎಲ್ಲೆಂದರಲ್ಲಿ ಹಾಕಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ಹಾಗೂ ಈ ಕೇಬಲ್ಸ್‌ಗಳನ್ನು ವ್ಯವಸ್ಥಿತವಾಗಿ ಅಳವಡಿಸಲು ಕೋರಲಾಯಿತು.
  **ಕ್ರಮ: ಓಎಫ್‌ಸಿ ಕೇಬಲ್ ರವರಿಗೆ ಪತ್ರ ಬರೆದು ಈ ಕುರಿತಾದ ಪಾಲಿಸಿಯನ್ನು ಪಡೆಯಲು ಅಗತ್ಯ ಕ್ರಮವಹಿಸಲು ಸೂಚಿಸಲಾಯಿತು.**

- ಅವಿಷ್ಕಾ ಅಕಾಡೆಮಿ ಶಾಲೆಯ ಬಳಿ ಧೂಮಪಾನ ಮಾಡುವುದನ್ನು ನಿಷೇಧಿಸಲು ಕೋರಲಾಯಿತು.
  **ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು ಈ ಕುರಿತಂತೆ ಪರಿಶೀಲಿಸಿ ಮಾರಾಟದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಧೂಮಪಾನ ನಿಷೇಧಿಸಿದೆ ಎಂಬ ಸೂಚನಾ ಪತ್ರವನ್ನು ಅಂಟಿಸಲು ಸೂಚಿಸಲಾಯಿತು.**

- ಬಜಾರ್ ಸ್ಟ್ರೀಟ್ ಹಾಗೂ ಇನ್ನೂ ಕೆಲವು ರಸ್ತೆಗಳಲ್ಲಿ ಚರಂಡಿಗಳನ್ನು ಸ್ವಚ್ಛಗೊಳಿಸಲು ಸ್ಲ್ಯಾಬ್ಸ್‌ಗಳನ್ನು ತೆರೆದಿದ್ದು, ಮುಚ್ಚದೇ ಇರುವುದರಿಂದ ತೊಂದರೆಯಾಗುವ ಸಂಭವವಿರುತ್ತದೆಯೆಂದು ಹಾಗೂ ಈ ಕುರಿತು ಅಗತ್ಯ ಕ್ರಮ ಕೈಗೊಳ್ಳಲು ಕೋರಲಾಯಿತು.
  **ಕ್ರಮ: ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಪತ್ರ ಮುಖೇನ ದೂರು ನೀಡಲು ಸೂಚಿಸಲಾಯಿತು.**

- ಪಾಲಿಕೆಯಿಂದ ವಾರ್ಡ್‌ನಲ್ಲಿ ಪ್ರತಿ ಶನಿವಾರದಂದು ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದು, ಆಳವಾದ ಸ್ವಚ್ಛತೆಯನ್ನು ಮಾಡುತ್ತಾ ಬರುತ್ತಿರುವುದರ ಬಗ್ಗೆ ಸ್ಥಳೀಯರು ಪ್ರಶಂಸೆ ವ್ಯಕ್ತಪಡಿಸಿ, ಡೆಬ್ರಿಸ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಕೋರಿದರು.
  **ಕ್ರಮ: ಡೆಬ್ರಿಸ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಸಿಲ್ಟ್ & ಟ್ರಾಕ್ಟರ್‌ಗಳನ್ನು ಪಡೆಯಲು ಇಂಜಿನಿಯರಿಂಗ್ ವಿಭಾಗದಿಂದ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಆಡಳಿತಾಧಿಕಾರಿಗಳ ಹಾಗೂ ಮಾನ್ಯ ಆಯುಕ್ತರ ಒಪ್ಪಿಗೆ ಪಡೆದು ಜೆ.ಸಿ.ಬಿ ಹಾಗೂ ಸಿಲ್ಟ್ & ಟ್ರಾಕ್ಟರ್‌ಗಳನ್ನು ಪಡೆಯಲು ಕ್ರಮವಹಿಸುವುದಾಗಿ ಸಭೆಗೆ ತಿಳಿಸಲಾಯಿತು.**

(ಪು.ತಿ.ನೋ)

- ಅನಗತ್ಯವಾಗಿ ಅಂಟಿಸಿರುವ ಪೋಸ್ಟರ್‌ಗಳನ್ನು ತೆರವುಗೊಳಿಸಲು ಜಂಟಿ ಆಯುಕ್ತರು, ರೆವಿನ್ಯೂ, ಪೂರ್ವ ವಲಯರವರಿಗೆ ಪತ್ರ ಬರೆಯಲು ಹಾಗೂ ಪೋಸ್ಟರ್‌ನಲ್ಲಿರುವ ವ್ಯಕ್ತಿ/ಸಂಸ್ಥೆಗಳಿಗೆ ಮಾನ್ಯ ಉಚ್ಛ ನ್ಯಾಯಲಯದ ಆದೇಶದಂತೆ FIR ದಾಖಲು ಮಾಡಲು ಕ್ರಮವಹಿಸುವಂತೆ ಸೂಚಿಸಲಾಯಿತು.

- ವಾರ್ಡ್ ವ್ಯಾಪ್ತಿಯಲ್ಲಿನ ಎಲ್ಲಾ 14 ಬ್ಲಾಕ್‌ಗಳಿಗೆ ಕಾರ್ಯ ಪ್ರವೃತ್ತ ನಾಗರೀಕರಿಂದ ಸ್ವ ಇಚ್ಛೆಯಿಂದ ಸ್ವಚ್ಛತೆಗಾಗಿ ಗಮನಹರಿಸಲು ಜವಾಬ್ದಾರಿ ವಹಿಸುವಂತೆ ಸೂಚಿಸಲಾಯಿತು. ಈ ಕುರಿತಂತೆ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಹೆಚ್.ಎಸ್.ಆರ್ ಲೇ ಔಟ್‌ನಲ್ಲಿರುವ ಕಲಿಕಾ ಕೇಂದ್ರಕ್ಕೆ ಭೇಟಿ ನೀಡಲು ಸೂಚಿಸಲಾಯಿತು.

- ತೋಟಗಾರಿಕೆ ಇಲಾಖೆ ವ್ಯಾಪ್ತಿಗೆ ಒಳಪಡುವ ಅಂಗಡಿಗಳನ್ನು ಮುಚ್ಚುವಂತೆ ಕೋರಲಾಗಿದ್ದು, ಈ ಕುರಿತು ಪರಿಶೀಲನೆಗಾಗಿ ಮುಂದಿನ ಬುಧವಾರ ಸ್ಥಳಕ್ಕೆ ಭೇಟಿ ನೀಡುವುದಾಗಿ ತಿಳಿಸಲಾಯಿತು.

**ಅಲ್ಲದೇ ಈ ಹಿಂದಿನ ಸಭೆಯಲ್ಲಿ ನಿರ್ಣಯಿಸಿದ ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಲಾಯಿತು.**

- ಪ್ರೆಸ್ಟೀಜ್ ಸಂಸ್ಥೆಯವರ ಸಹಭಾಗಿತ್ವದಲ್ಲಿ ಹಲಸೂರು ಕೆರೆಯನ್ನು ಅಭಿವೃದ್ಧಿಪಡಿಸಲು ಸಭೆಯನ್ನು ಆಯೋಜಿಸಲು ತೀರ್ಮಾನಿಸಲಾಯಿತು.

- ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲೆಂದರಲ್ಲಿ ರಸ್ತೆಗಳನ್ನು ಅಗೆದು ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟು ಮಾಡುತ್ತಿರುವ ಸ್ಮಾರ್ಟ್ ಸಿಟಿ ರವರಿಗೆ ಷೋಕಾಸ್ ನೋಟಿಸ್ ಜಾರಿಗೊಳಿಸಲು ಸೂಚಿಸಲಾಗಿತ್ತು. ಅದರಂತೆ ಸ್ಮಾರ್ಟ್ ಸಿಟಿರವರಿಗೆ ನೋಟಿಸ್ ನೀಡಲಾಯಿತು ಹಾಗೂ ಮುಂದಿನ ಸಭೆಗೆ ಮುಖ್ಯ ಅಭಿಯಂತರರು/ಕಾರ್ಯಪಾಲಕ ಅಭಿಯಂತರರು, ಸ್ಮಾರ್ಟ್ ಸಿಟಿರವರನ್ನು ಆಹ್ವಾನಿಸಲು ಸೂಚಿಸಲಾಯಿತು.

- ಅನಧಿಕೃತವಾಗಿ ನಿರ್ಮಾಣಗೊಂಡಿರುವ ಮೊಬೈಲ್ ಟವರ್‌ಗಳನ್ನು ತೆರವುಗೊಳಿಸಲು ಹಾಗೂ ಈ ಕುರಿತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರು ನಿಗದಿಪಡಿಸಲಾಗಿರುವ ಮಾರ್ಗಸೂಚಿಗಳನ್ನು ಪಡೆಯಲು ಪತ್ರ ಬರೆಯಲು ಸೂಚಿಸಲಾಯಿತು. ಅದರಂತೆ ದಿನಾಂಕ: 18.12.2020 ರಂದು ಪತ್ರ ಸಿದ್ಧಪಡಿಸಿ ರವಾನೆ ಮೂಲಕ ಕಳುಹಿಸಲಾಯಿತು.

- ಅನಧಿಕೃತವಾಗಿ ಅಂಟಿಸಲಾಗಿರುವ ಪೋಸ್ಟರ್‌ಗಳನ್ನು ತೆರವುಗೊಳಿಸುವುದು.
  **ಕ್ರಮ: ಎಫ್‌ಐಆರ್ ದಾಖಲು ಮಾಡಲು ಹಾಗೂ ಕೂಡಲೇ ತೆರವುಗೊಳಿಸಲು ಪೋಲೀಸ್ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು.**

- ಹಲಸೂರು ಕೆರೆಯ ಅಭಿವೃದ್ಧಿ ಕುರಿತು ಚರ್ಚಿಸಲು ಸ್ಟಾರ್ಮ್ ವಾಟರ್ ಡ್ರೈನ್ ಹಾಗೂ ಕೆರೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಪ್ರತ್ಯೇಕವಾಗಿ ಸಭೆಯನ್ನು ಆಯೋಜಿಸಿ ಸಬ್ ಕಮಿಟಿ ರಚಿಸಿ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

- ರಾಜಕಾಲುವೆ/ನಾಳಗಳ ಸ್ವಚ್ಛತೆಗಾಗಿ ಸ್ಟಾರ್ಮ್ ವಾಟರ್ ಡ್ರೈನ್‌ರವರಿಗೆ ಪತ್ರ ಬರೆದು ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು.

**(ಮು.ತಿ.ನೋ)**

- ಹಳೆಯ ವಾಹನಗಳನ್ನು ಅನಧಿಕೃತವಾಗಿ ಪಾರ್ಕಿಂಗ್ ಮಾಡಿರುವುದರಿಂದ ಟ್ರಾಫಿಕ್ ದಟ್ಟಣೆ ಹೆಚ್ಚಾಗುತ್ತಿದ್ದು, ಸಾರ್ವಜನಿಕರಿಗೆ ಪುಟ್‌ಪಾತ್‌ಗಳಲ್ಲಿ ನಡೆದಾಡಲು ಅನಾನುಕೂಲವಾಗುತ್ತಿರುವ ಕುರಿತು ಸಭೆಗೆ ಹಾಜರಾಗಿದ್ದ ಅಸಿಸ್ಟಂಟ್ ಸಬ್‌ಇನ್ಸ್‌ಪೆಕ್ಟರ್, ಸಂಚಾರಿ ವಿಭಾಗರವರೊಂದಿಗೆ ಚರ್ಚಿಸಲಾಗಿದ್ದು, ಅವರು ಈ ಕುರಿತಾಗಿ ಹಿರಿಯ ಅಧಿಕಾರಿಗೆ ಪತ್ರ ಮುಖೇನ ದೂರು ನೀಡುವಂತೆ ಸಲಹೆ ನೀಡಿದರು.

- ಅನಧಿಕೃತವಾಗಿ ಹಾಗೂ ಖಾಲಿ ಇರುವ ಬಿಬಿಎಂಪಿ ಜಾಗಗಳನ್ನು ಗುರುತಿಸಿ ಗ್ರಂಥಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು.

- ಬೆಸ್ಕಾಂ ಇಲಾಖೆಯವರಿಂದ ಕೈಗೊಳ್ಳಬೇಕಾದ ತುರ್ತು ಕೆಲಸಗಳ ಕುರಿತು ಸ್ಥಳೀಯ ನಿವಾಸಿಗಳು ಸಭೆಗೆ ಕೋರಿದರು.

- ಸಾರ್ವಜನಿಕ ಶೌಚಾಲಯ/ಇ ಟಾಯ್ಲೆಟ್ಸ್/ಓಡಿಎಫ್ ++ ಟಾಯ್ಲೆಟ್ಸ್‌ಗಳನ್ನು ನಿರ್ಮಿಸಲು ಟೆಂಡರ್ ಕರೆಯಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘತ್ಯಾನಿ) ರವರಿಗೆ ಸೂಚಿಸಲಾಯಿತು.

- ಸರ್ಕಾರದ ಮಾರ್ಗಸೂಚಿಗಳನ್ವಯ ಹೊಸ ವರ್ಷ ಸಂಭ್ರಮಾಚರಣೆ ಮಾಡುವಂತೆ ಸಾರ್ವಜನಿಕರಿಗೆ ಅನುವು ಮಾಡಿಕೊಡಲು ಹಾಗೂ ಶಬ್ದ ಮಾಲಿನ್ಯ ಮತ್ತು ವಾಯುಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮವಹಿಸಬೇಕಾಗಿ ವೃತ್ತ ನಿರೀಕ್ಷಕರು/ಪೋಲೀಸ್ ವರಿಷ್ಠಾಧಿಕಾರಿ-ಕಾನೂನು ಮತ್ತು ಸುವ್ಯವಸ್ಥೆ, ಹಲಸೂರು ವ್ಯಾಪ್ತಿ ರವರಿಗೆ ಸೂಚಿಸಿ ಕ್ರಮವಹಿಸಿರುವುದಕ್ಕೆ ಸಮಿತಿ ಸದಸ್ಯರಿಂದ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

ಅಂತಿಮವಾಗಿ ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ಸೂಕ್ತ ಕ್ರಮಕ್ಕಾಗಿ ಅನುಪಾಲನಾ ವರದಿಯನ್ನು ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಜಂಟಿ ಆಯುಕ್ತರು (ಘತ್ಯಾನಿ) ಮತ್ತು**
**ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ-90, ಹಲಸೂರು,**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**(ಪು.ತಿ.ನೋ)**

ರವರಿಗೆ,

1. ಮುಖ್ಯ ಅಭಿಯಂತರರು. ಛತ್ಯಾನಿ. ಪೂರ್ವವಲಯ
2. ಮುಖ್ಯ ಅಭಿಯಂತರರು. ಕೆರೆಗಳು. ಪೂರ್ವವಲಯ
3. ಅಧೀಕ್ಷಕ ಅಭಿಯಂತರರು. ಪೂರ್ವವಲಯ
4. ಮುಖ್ಯ ಆರೋಗ್ಯಾಧಿಕಾರಿಗಳು. ಶಿವಾಜಿನಗರ ವಿಭಾಗ
5. ಕಾರ್ಯಪಾಲಕ ಅಭಿಯಂತರರು. ಕಂದಾಯ ಇಲಾಖೆ. ಶಿವಾಜಿನಗರ ವಿಭಾಗ
6. ಕಂದಾಯ ಅಧಿಕಾರಿ (ಶಿವಾಜಿನಗರ)
7. ಅರಣ್ಯ ಅಧಿಕಾರಿ (ಪೂರ್ವ ವಲಯ)
8. ತೋಟಗಾರಿಕೆ ಅಧೀಕ್ಷಕರು (ಪೂರ್ವ)
9. ಆರೋಗ್ಯ ವೈದ್ಯಾಧಿಕಾರಿ (ಪೂರ್ವ)
10. ಉಪ ನಿರ್ದೇಶಕರು (ಪಶುಪಾಲನೆ)
11. ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ-ಪೂರ್ವ)
12. ಆರಕ್ಷಕ ನಿರೀಕ್ಷಕರು (ಹಲಸೂರು-ಸಂಚಾರಿ) ವಿಭಾಗ
13. ಆರಕ್ಷಕ ನಿರೀಕ್ಷಕರು (ಹಲಸೂರು-ಕಾನೂನು ಮತ್ತು ಸುವ್ಯವಸ್ಥೆ) ವಿಭಾಗ
14. ಸಹಾಯಕ ಕಾರ್ಯಪಾಲಕ ಅಭಿಯಂತರರು. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯೂಎಸ್ಎಸ್‌ಬಿ)
15. ಸಹಾಯಕ ಕಾರ್ಯಪಾಲಕ ಅಭಿಯಂತರರು. ಬೆಸ್ಕಾಂ
16. ಸಹಾಯಕ ಕಾರ್ಯಪಾಲಕ ಅಭಿಯಂತರರು. ಅರಣ್ಯ ಇಲಾಖೆ. ಹಲಸೂರು ವಿಭಾಗ
17. ಸಹಾಯಕ ಕಾರ್ಯಪಾಲಕ ಅಭಿಯಂತರರು. ಕಂದಾಯ ಇಲಾಖೆ. ಹಲಸೂರು ವಿಭಾಗ
18. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮಳೆ ನೀರಿನ ಚರಂಡಿ)
19. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ವಿದ್ಯುತ್-ಪೂರ್ವ)
20. ವಾರ್ಡ್ ಮಾರ್ಷಲ್ & ಸೂಪರ್‌ವೈಸರ್
21. ಸಹಾಯಕ ಕಾರ್ಯಪಾಲಕ ಅಭಿಯಂತರರು. ಛತ್ಯಾನಿ
22. ಸಹಾಯಕ ಕಾರ್ಯಪಾಲಕ ಅಭಿಯಂತರರು. ಇಂಜಿನಿಯರ್ ವಿಭಾಗ. ಶಿವಾಜಿನಗರ ವಿಭಾಗ
23. ಹಿರಿಯ ಆರೋಗ್ಯ ಪರಿವೀಕ್ಷಕರು. ವಾರ್ಡ್ ಸಂಖ್ಯೆ-೯೦
24. ಕಿರಿಯ ಆರೋಗ್ಯ ಪರಿವೀಕ್ಷಕರು. ಛತ್ಯಾನಿ
25. ಗುತ್ತಿಗೆದಾರರು. ಛತ್ಯಾನಿ ವಿಭಾಗ
26. ರೆಸಿಡೆನ್ಸ್ ವೆಲ್ಫೇರ್ ಅಸೋಸಿಯೇಷನ್. ಹಲಸೂರು
27. ಪ್ರಧಾನ ಗ್ಯಾಂಗ್ ಮೆನ್
28. ಲಿಂಕ್ ವರ್ಕರ್ಸ್
29. ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿ/ನೌಕರರುಗಳ ಗಮನಕ್ಕೆ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು:**

1. ಮಾನ್ಯ ಆಡಳಿತಾಧಿಕಾರಿಗಳು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ವಿಶೇಷ ಆಯುಕ್ತರು/ಸಹಾಯಕ ಆಯುಕ್ತರು. ಆಡಳಿತರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಜಂಟಿ ಆಯುಕ್ತರು. ಪೂರ್ವ ವಲಯರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಉಪ ಆಯುಕ್ತರು. ಪೂರ್ವ ವಲಯರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6. ಸಂಬಂಧಪಟ್ಟವರಿಗೆ/ಕಛೇರಿ ಪ್ರತಿ